ದಿನಾಂಕಃ 24-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಎ.ಆರ್.ಎಮ್. ವಕೀಲರಿಂದಃ**

27. ಈ ದಿನ ಹಾಜರು ಮಾಡಿದ ದಾಖಲೆಯಾದ ಎಮ್.ಆರ್.ನಂ.H58 ನಮಗೆ ಸಂಂಧಿಸಿದ ಜಮೀನು ಸರ್ವೆ ನಂ.220/*/2 ಕ್ಕೆ ಸಂಬಂಧಿಸಿದ್ದು ಆಗಿದ್ದು, ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ಅದರಂತೆ ಅವಾರ್ಡ ನನ್ನ ತಂದೆಯಾದ ಅಣ್ಣಪ್ಪ ಮದಪ್ಪ ತೇಲಸಂಗ ಅವರ ಹೆಸರಿಗೆ ಆಗಿದೆ, ನಂತರದಲ್ಲಿ ಅವರು ದಿನಾಂಕ 21.10.2014 ರಂದು ಖಾತೆ ಬದಲಾವಣೆ ಮಾಡಿದಂತೆ ಸದರಿ ಜಮೀನಿನ ಹಕ್ಕು ನನಗೆ ಸದರಿ ದಾಖೆಯ ನಿಪಿ-15 ರಂತೆ ಬಂದಿದೆ.

**28. ಪಾಟೀ ಸವಾಲುಃ 1 ಮತ್ತು 3ನೇ ಎದುರುದಾರ ಪರ ಡಿಜಿಪಿ ರವರಿಂದ**

ನನ್ನ ತಂದೆ ದಿ. 04.04.2013 ರಂದು ಮೃತಪಟ್ಟಿರುತ್ತಾರೆ. ಅವಾರ್ಡ ನನ್ನ ತಂದೆ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಅವಾರ್ಡ ಆದ ನಂತರ ಎಸ್.ಎಲ್.ಎ.ಒ ರವರು ನನ್ನ ತಂದೆಗೆ ನೋಟಿಸು ಕಳಿಸಿದ್ದರು ಎಂದರೆ ಸರಿ. ನಾನು ನೋಟಿಸ ಬಂದ ನಂತರ ಎಸ್.ಎಲ್.ಎ.ಒ ರವರಿಗೆ ನೋಟಿಸು ನಮ್ಮ ತಂದೆ ಹೆಸರಿಗೆ ಕಡಿಮೆ ಮಾಡಿ ನಮ್ಮ ಹೆಸರಿಗೆ ಅವಾರ್ಡ ಮಾಡಬೇಕು ಅಂತಾ ತಕರಾರು ಸಲ್ಲಿಸಿಲ್ಲ. ಅವಾರ್ಡ ಮೊತ್ತವನ್ನು ನಾನು ಪಡೆದಿರುತ್ತೇನೆ. ನನ್ನ ತಂದೆಯ ಮರಣದ ವಿಷಯವನ್ನು ನಾವು ಎಸ್.ಎಲ್.ಎ.ಒ ಕಚೇರಿಗೆ ತಿಳಿಸದೇ ಇರುವ ಕಾರಣ ನನ್ನ ತಂದೆ ಹೆಸರಿಗೆ ಅವಾರ್ಡ ಆಗಿದೆ ಎಂದರೆ ಸರಿಯಲ್ಲ.

29. ಎಸ್.ಎಲ್.ಎ.ಒ ರವರು ನಮಗೆ ನೀಡಿದ ಪರಿಹಾರದ ಮೊತ್ತ ಸರಿಯಾಗಿ ಇರುವ

ಕಾರಣ ನಾವು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅವಾರ್ಡ ನನ್ನ ಹೆಸರಿಗೆ ಆಗದೇ ಇರುವ ಕಾರಣ ನಾನು ಹೆಚ್ಚಿನ ಪರಿಹಾರದ ಹಣ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

30. ನಮ್ಮ ತಂದೆಯ ಮರಣದ ನಂತರ ನಾನು ವಾರಸಾ ಪ್ರಮಾಣ ಪತ್ರ ಪಡೆದಿದ್ದೇನೆ. ವಾರಸಾ ಪ್ರಮಾಣ ಪತ್ರ ನ್ಯಾಯಾಲಯದ ಮುಂದೆ ಹಾಜರು ಮಾಡಲು ಯಾವುದೇ ತೊಂದರೆ ಇಲ್ಲ. ನನ್ನ ತಂದೆಯವರು ತನ್ನ ಹೆಂಡತಿ, 3 ಗಂಡು ಮಕ್ಕಳನ್ನು ಅಗಲಿರುತ್ತಾರೆ. ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದ ಪರಿಹಾರ ಧನದಲ್ಲಿ ನನ್ನ ತಾಯಿ ಮತ್ತು ಸಹೋದರರಿಗೂ ಸಹ ಪಾಲು ಇದೆ ಎಂದರೆ ಸರಿ. ಇದುವರೆಗೂ ನಮ್ಮ ಆಸ್ತಿಯಲ್ಲಿ ಪಾಲು ವಾಟನಿ ಆಗಿಲ್ಲ ಎಂದರೆ ಸರಿ.

31. ರೆಫರನ್ಸ ಅರ್ಜಿಯಲ್ಲಿ ಸ್ವಾಧೀನಪಡಿಸಿಕೊಂಡ ಎಲ್ಲಾ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇವೆ. ಸ್ವಾಧೀನಪಡಿಸಿಕೊಂಡ ಎಲ್ಲಾ ಜಮೀನು ನನ್ನ ಪಾಲಿಗೆ ಏನೂ ಸಂಪೂರ್ಣವಾಗಿ ಬಂದಿರುವುದಿಲ್ಲ. ನನಗೆ ಭೂಸ್ವಾಧೀನಪಡಿಸಿಕೊಂಡ ಸಂಪೂರ್ಣ ಜಮೀನಿಗೆ ರೆಫರೆನ್ಸ ಅರ್ಜಿ ಸಲ್ಲಿಸಲು ಯಾವುದೇ ಅಧಿಕಾರ ಪತ್ರ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಗೂ ಅವರು ಮೌಖಿಕವಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಲಿಖಿತ ಅಧಿಕಾರ ಪತ್ರ ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

32. ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ನನಗೆ ಸಂಪೂರ್ಣ ಅಧಿಕಾರ ಇರುವುದಿಲ್ಲ ಅಂತಾ ನನಗೆ ರೆಫರೆನ್ಸ ಅರ್ಜಿ ಸಲ್ಲಿಸುವ ಮುಂಚೆಯೇ ತಿಳಿದಿತ್ತು. ಭೂಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಪೂರ್ಣ ಅಧಿಕಾರ ಇಲ್ಲ ಎಂದು ಗೊತ್ತಿದ್ದರೂ ಸಂಪೂರ್ಣ ಜಮೀನಿಗೆ

ಸಂಬಂಧಿಸಿದಂತೆ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**33. ಪಾಟೀ ಸವಾಲುಃ 2ನೇ ಎದುರುದಾರ ಪರ ಶ್ರೀ. ಎಲ್.ಟಿ.ಟಿ. ರವರಿಂದ**

2ನೇ ಎದುರುದಾರ ಪರ ವಕೀಲರು 1 ಮತ್ತು 2ನೇ ಎದುರುದಾರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಜಿಲ್ಲಾ ಮತ್ತು ಸತ್ರ ಶೆನ್ಸ ನ್ಯಾಯಾಧೀಶರು,
ಬೆಳಗಾವಿ.